RNU AIR DHARWAD

APRIL 07, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ; 'ಏಕೀಕೃತ ವಕ್ಫ್ ನಿರ್ವಹಣೆ, ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ – 'ಉಮ್ಮೀದ್ 2025' ಕಾಯ್ದೆ, ಜಾರಿಗೆ.**
- **ರಾಜ್ಯದ 31 ಜಿಲ್ಲೆಗಳ, 6 ಸಾವಿರದ 380 ಗ್ರಾಮಗಳಲ್ಲಿ, ಕುಡಿಯುವ ನೀರಿನ ಬವಣೆ – ಆರ್. ಅಶೋಕ, ಕಳವಳ.**
- **'ಆರೋಕ್ಯಕರ ಆರಂಭಗಳು, ಭರವಸೆಯ ಭವಿಷ್ಯಗಳು' ಧ್ಯೇಯದೊಂದಿಗೆ, ಇಂದು 'ವಿಶ್ವ ಆರೋಗ್ಯ ದಿನಾಚರಣೆ'.**
- **'ಪೋಷಣ್ ಭೀ, ಪಢೇ ಭೀ'; ರಾಜ್ಯಾದ್ಯಂತ ನಾಳೆಯಿಂದ, 'ಪೋಷಣ್ ಪಖ್ವಾಡಾ'.**

<><><>

**ಈಗ ವಾರ್ತೆಗಳ ವಿವರ**

<><><>

**ಹರ್ಷ**

**ವಕ್ಫ್ ತಿದ್ದುಪಡಿ ಮಸೂದೆ, ಏಕೀಕೃತ ವಕ್ಫ್ ನಿರ್ವಹಣೆ ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ, 'ಉಮ್ಮೀದ್ 2025', ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಅಂಕಿತದೊಂದಿಗೆ, ಕಾಯ್ದೆಯಾಗಿ, ದೇಶಾದ್ಯಂತ ಜಾರಿಗೊಂಡಿವೆ. ಮುಸಲ್ಮಾನ್ ವಕ್ಫ್ ರದ್ದು ಮಸೂದೆ – 2024ಕ್ಕೂ ರಾಷ್ಟ್ರಪತಿಯವರು, ತಮ್ಮ ಒಪ್ಪಿಗೆ ಸೂಚಿಸಿದ್ದು, ಆ ಕಾಯ್ದೆ ರದ್ದುಗೊಂಡಿದೆ. ದೇಶಾದ್ಯಂತ ವಕ್ಫ್ ಆಸ್ತಿ ನಿರ್ವಹಣೆ ಹಾಗೂ ಆಡಳಿತದ ಜೊತೆಗೆ, ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವ ಗುರಿಯನ್ನು, ಉಮ್ಮೀದ್ ಕಾಯ್ದೆ ಹೊಂದಿದೆ. ವಕ್ಫ್ ರಚನೆಯನ್ನು ಮರು ವ್ಯಾಖ್ಯಾನಿಸಿ, ಸರ್ಕಾರದ ಮೇಲ್ವಿಚಾರಣೆಯನ್ನು ಸಬಲೀಕರಿಸುವುದಕ್ಕೆ ಆದ್ಯತೆ ನೀಡಲಾಗಿದೆ.**

**ಈ ಕುರಿತು ಒಂದು ವರದಿ..**

<><><>

*ವಕ್ಫ್ ತಿದ್ದುಪಡಿ ಕುರಿತು, ಜಂಟಿ ಸಂಸದೀಯ ಮಂಡಳಿಯಲ್ಲಿ ನಡೆದ  ಚರ್ಚೆಗಳು ಐತಿಹಾಸಿಕ; ಸಂವಿಧಾನ ಮತ್ತು ಕಾನೂನು ತಜ್ಞರ ಸಲಹೆ ಪಡೆದು, ವಕ್ಫ್ ತಿದ್ದುಪಡಿ ಮಸೂದೆ– 2025 'ಉಮ್ಮೀದ್' ಹಾಗೂ ಮುಸಲ್ಮಾನ್ ವಕ್ಫ್ ರದ್ದು ಮಸೂದೆ – 2024 ಅನ್ನು, ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಲಾಗಿದೆ ಎಂದು, ಕೇಂದ್ರದ ಅಲ್ಪ ಸಂಖ್ಯಾತರ ವ್ಯವಹಾರಗಳ ಖಾತೆ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.*

*ಲೋಕಸಭೆಯಲ್ಲಿ, 288 ಸಂಸದರು ಮಸೂದೆಗಳ ಪರ ಹಾಗೂ 232 ಸಂಸದರು ವಿರೋಧ ನಿಲುವು ತಾಳಿ, ಮತ ಚಲಾಯಿಸಿದ್ದಾರೆ.*

*ರಾಜ್ಯಸಭೆಯ 128 ಜನ ಸಂಸದರು, ಮಸೂದೆಯ ಪರವಾಗಿ ಹಾಗೂ 95 ಜನ ಸಂಸದರು, ಮಸೂದೆಯ ವಿರುದ್ಧ ತಮ್ಮ ನಿಲುವು ವ್ಯಕ್ತಪಡಿಸಿ, ಮತ ಚಲಾಯಿಸಿದರು.*

*ಕನಿ ್ಠ ಇಬ್ಬರು ಮಹಿಳಾ ಸದಸ್ಯೆಯರು ಸೇರಿದಂತೆ, ಕೇಂದ್ರ ವಕ್ಫ್ ಮಂಡಳಿಯ ಎಲ್ಲಾ ಸದಸ್ಯರು ಮುಸ್ಲಿಮರಾಗಿರಬೇಕು. ಇಬ್ಬರು ಸದಸ್ಯರು ಮುಸ್ಲಿಮೇತರರಾಗಿರಬೇಕು. ಸಂಸದರು, ವಿಶ್ರಾಂತ ನ್ಯಾಯಾಧೀಶರು ಮತ್ತು ಕಾಯ್ದೆಯ ಪ್ರಕಾರ ಮಂಡಳಿಗೆ ನೇಮಕಗೊಂಡ ಗಣ್ಯ ವ್ಯಕ್ತಿಗಳು, ಮುಸ್ಲಿಮರಾಗಿರಬೇಕಿಲ್ಲ.*

*ಮುಸ್ಲಿಮೇತರ ಸದಸ್ಯರು ಮತ್ತು ಮಹಿಳೆಯರನ್ನು, ವಕ್ಫ್–ಸಂಬಂಧಿತ ಸಂಸ್ಥೆಗಳಲ್ಲಿ ಸೇರಿಸಿಕೊಳ್ಳುವ ಮೂಲಕ, ಒಳಗೊಳ್ಳುವಿಕೆಯನ್ನು ಖಚಿತಪಡಿಸುವುದಕ್ಕೆ, ಆದ್ಯತೆ ನೀಡಲಾಗಿದೆ.*

*ಈ ನಿಬಂಧನೆಗಳು, ದೇಶದಲ್ಲಿ, ವಕ್ಫ್ ಆಸ್ತಿ ನಿರ್ವಹಣೆಯನ್ನು, ಪಾರದರ್ಶಕ, ವಿಶ್ವಾಸಾರ್ಹ ಹಾಗೂ ತಂತ್ರಜ್ಞಾನ ಆಧರಿಸಿ, ಆಧುನೀಕರಿಸುವ ನಿಟ್ಟಿನಲ್ಲಿ ನಿರ್ಣಾಯಕ ಹೆಜ್ಜೆಯಾಗಿದೆ ಎಂದು, ಸ್ಪಷ್ಟ ಪಡಿಸಲಾಗಿದೆ.*

<><><>

ವಿವೇಕ ಧ್ವನಿ 67 ಸೆಕೆಂದುಗಳು

<><><>

ರಾಜ್ಯದ 31 ಜಿಲ್ಲೆಗಳ, ಒಟ್ಟು 6 ಸಾವಿರದ 380 ಗ್ರಾಮಗಳಲ್ಲಿ, ಗ್ರಾಮಸ್ಥರು ಕುಡಿಯುವ ನೀರಿನ ಬವಣೆ ಎದುರಿಸುತ್ತಿದ್ದು, ಗ್ರಾಮ ಪಂಚಾಯಿತಿಗಳು, ಅನುದಾನವಿಲ್ಲದೆ, ಸೊರಗುತ್ತಿವೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ, ಎಕ್ಸ್ ಮಾಧ್ಯಮದಲ್ಲಿ, ಅಸಮಾಧಾನ ವ್ಯಕ್ತ ಪಡಿಸಿದ್ದಾರೆ. ಕೂಡಲೇ, ಬರ ಪರಿಸ್ಥಿತಿ ಸಮೀಕ್ಷಿಸಿ, ಬರ ಪೀಡಿತ ತಾಲೂಕುಗಳನ್ನು ಘೋಷಿಸುವಂತೆ, ಮುಖ್ಯಮಂತ್ರಿಯವರನ್ನು ಆಗ್ರಹಿಸಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ, ಎಲ್ಲ ಗ್ರಾಮ ಪಂಚಾಯಿತಿಗಳಿಗೆ, ಕೂಡಲೇ ತಲಾ 25 ಲಕ್ಷ ರೂಪಾಯಿ ಅನುದಾನ ಬಿಡುಗಡೆ ಮಾಡಿ, ಬಿರು ಬೇಸಿಗೆಯಲ್ಲಿ, ಜನತೆಗೆ ಕುಡಿಯುವ ನೀರು ಖಾತ್ರಿ ಪಡಿಸುವಂತೆ, ಒತ್ತಾಯಿಸಿದ್ದಾರೆ.

<><><>

ರಾಜ್ಯ ಸರ್ಕಾರದ ವಿರುದ್ಧ, ಇಂದಿನಿಂದ 16 ದಿನಗಳ ವರೆಗೆ, ಬಿಜೆಪಿ, ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ಆಯೋಜಿಸಿದೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮೈಸೂರಿನಲ್ಲಿ ಇಂದು, ನಾಲ್ಕು ಹಂತದ ಯಾತ್ರೆಗೆ ಚಾಲನೆ ನೀಡಲಿದ್ದಾರೆ ಎಂದರು.

<><><>

ಯು.ಜಿ., ಸಿ,ಇ,ಟಿ. 2025ರ ಪರೀಕ್ಷೆಯ, ಪ್ರವೇಶ ಪತ್ರವನ್ನು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಿಡುಗಡೆ ಮಾಡಿದೆ. ಅಭ್ಯರ್ಥಿಗಳು ಪ್ರಾಧಿಕಾರದ ಲಿಂಕ್ ಬಳಸಿ, ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರವೇಶ ಪತ್ರದ ಜೊತೆಗೆ, ಮಾದರಿ ಒ.ಎಂ.ಆರ್. ಶೀಟ್ ಸಹ ಈ ಬಾರಿ ನೀಡಲಾಗುತ್ತಿದೆ. ಇದೇ 15, 16 ಮತ್ತು 17 ರಂದು, ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿಗೆ, ಸಿ.ಇ.ಟಿ. ಪರೀಕ್ಷೆ ನಡೆಯಲಿದೆ ಎಂದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಪ್ರಕಟಿಸಿದೆ.

<><><>

ಶ್ರೀ ರಾಮ ನವಮಿ ಹಿನ್ನೆಲೆ, ನಾಡಿನಾದ್ಯಂತ ಶ್ರೀ ರಾಮ ಮಂದಿರಗಳಲ್ಲಿ, ವಿಶೇಷ ಪೂಜಾ ಕೈಂಕರ್ಯ, ರಥೋತ್ಸವ, ಪಾರಾಯಣ ಹಾಗೂ ಭಜನೆಗಳು, ಶ್ರದ್ಧಾ ಭಕ್ತಿಯಿಂದ ನೆರವೇರಿದ ವರದಿಗಳು, ಬಂದಿವೆ.

<><><>

ಚಿಕ್ಕಮಗಳೂರು ಹೊರ ವಲಯದ, ಹಿರೇಮಗಳೂರಿನ ಪ್ರಸಿದ್ಧ ಶ್ರೀ ಕೋದಂಡ ರಾಮಚಂದ್ರಸ್ವಾಮಿ ದೇವಾಲಯದಲ್ಲಿ, ಖ್ಯಾತ ವಾಗ್ಮಿ ಹಿರೇಮಗಳೂರು ಕಣ್ಣನ್ ಅವರು, ನಿತ್ಯದಂತೆ, ಕನ್ನಡದಲ್ಲಿಯೇ ಮಂತ್ರ ಘೋಷ ಪಠಿಸಿ, ಶ್ರೀರಾಮ ಜಯಂತಿ ಆಚರಿಸಿದರು. ಸಾವಿರಾರು ಭಕ್ತಾದಿಗಳು, ಸಂಭ್ರಮದಿಂದ ಪಾಲ್ಗೊಂಡು, ಬಾಲ ರಾಮನ ತೊಟ್ಟಿಲೋತ್ಸವ ನೆರವೇರಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಇಂದು 'ವಿಶ್ವ ಆರೋಗ್ಯ ದಿನಾಚರಣೆ'. 'ಆರೋಕ್ಯಕರ ಆರಂಭಗಳು, ಭರವಸೆಯ ಭವಿಷ್ಯಗಳು' ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ. ಸಾರ್ವಜನಿಕರ ಸಹಭಾಗಿತ್ವದಲ್ಲಿ, ಸಮುದಾಯದ ಆರೋಗ್ಯ ಹಾಗೂ ಸುದೃಢತೆ ಖಾತ್ರಿಪಡಿಸಲು, ಈ ದಿನ ಮೀಸಲಿದೆ. ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದಲ್ಲಿ, ಆರೋಗ್ಯದ ಕುರಿತು, ತಿಳಿವಳಿಕೆ ಮೂಡಿಸಲು, ವಿಶೇಷ ಹಾಗೂ ಅರ್ಥಪೂರ್ಣ ಕಾರ್ಯಕ್ರಮಗಳನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂದು ಆಯೋಜಿಸಿದೆ.

<><><>

ದಕ್ಷಿಣಕನ್ನಡ ಜಿಲ್ಲೆ, ಸುಳ್ಯ ತಾಲೂಕು, ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ, ಕೋಲ್ಚಾರು ಗ್ರಾಮದಲ್ಲಿ ಸಹ ಶಿಕ್ಷಕಿಯಾಗಿರುವ, ಜಲಜಾಕ್ಷಿ ಟೀಚರ್, ಶಾಲೆಯ ವಿದ್ಯಾರ್ಥಿನಿಯರಿಗೆ, ಮುಟ್ಟಿನ ನೈರ್ಮಲ್ಯದ ಕುರಿತು, ವಿಶೇಷ ಕಾಳಜಿ

ವಹಿಸಿ, ಸಹಜವಾಗಿ ದೈನಂದಿನ ಚಟುವಟಿಕೆಗಳಲ್ಲಿ ತೊಡಗುವಂತೆ, ಸುದೃಢ ಆರೋಗ್ಯ ಕಾಪಾಡಿಕೊಳ್ಳುವಂತೆ, ಪ್ರೇರೇಪಿಸುತ್ತಿದ್ದಾರೆ.

ವಿಶ್ವ ಆರೋಗ್ಯ ದಿನದ ಸಂದರ್ಭದಲ್ಲಿ, ಅವರು ತಮ್ಮ ಪ್ರಯತ್ನದ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಜಲಜಾಕ್ಷಿ ಟೀಚರ್ ಧ್ವನಿ 45 ಸೆಕೆಂದುಗಳು

<><><>

ರಾಜ್ಯಾದ್ಯಂತ, ನಾಳೆಯಿಂದ 22ನೇ ತಾರೀಖಿನ ವರೆಗೆ, 15 ದಿನಗಳ ಕಾಲ, 'ಪೋಷಣ್ ಮಾಹ್ ಅಥವಾ ಪಖ್ವಾಡಾ' ಆಯೋಜಿತವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಕಳೆದ 2018ರ ಮಾರ್ಚ್ 8 ರಂದು, ಈ ಯೋಜನೆಗೆ ಚಾಲನೆ ನೀಡಿದ್ದಾರೆ. ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಸೂಚಿಸಿದಂತೆ, ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 7ನೇ ಆವೃತ್ತಿಯ, ಪೋ ’ಣ್ ಪಖ್ವಾಡಾ ಆಯೋಜಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ವಿಜಯಪುರ ಜಿಲ್ಲೆ ಉಪ ನಿರ್ದೇಶಕ ಕೆ.ಕೆ. ಚೌವ್ಹಾಣ್, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಉಪ ನಿರ್ದೇಶಕ ಕೆ.ಕೆ. ಚೌವ್ಹಾಣ್ 50 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮೀಜಿಯವರ, 189ನೇ ಜಯಂತ್ಯುತ್ಸವದ ಅಂಗವಾಗಿ, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದ, ಕೈಲಾಸ ಮಮಟಪದಲ್ಲಿ, ತೊಟ್ಟಿಲೋತ್ಸವ ಹಾಗೂ ಉಭಯ ಆರೂಢ ಶ್ರೀಗಳ ಪಲ್ಲಕ್ಕಿ ಮೆರವಣಿಗೆ ನೆರವೇರಿತು.

<><><>

ಮಂಡ್ಯದ ಮೇಲುಕೋಟೆ ಶ್ರೀ ಚಲುವ ನಾರಾಯಣ ಸ್ವಾಮಿ, ವೈರಮುಡಿ ಉತ್ಸವ ಇಂದು, ವಿಜೃಂಭಣೆಯಿಂದ ನಡೆಯಲಿದೆ.

<><><>

ಬಿಜೆಪಿ ಸಂಸ್ಥಾಪನಾ ದಿನಾಚರಣೆ ಅಂಗವಾಗಿ, ಹುಬ್ಬಳ್ಳಿಯ ಪಕ್ಷದ ಕಚೇರಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಧ್ವಜಾರೋಹಣ ನೆರವೇರಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ; ‘ಏಕೀಕೃತ ವಕ್ಫ್ ನಿರ್ವಹಣೆ, ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ – ‘ಉಮ್ಮೀದ್ 2025’ ಕಾಯ್ದೆ, ಜಾರಿಗೆ.
- ರಾಜ್ಯದ 31 ಜಿಲ್ಲೆಗಳ, 6 ಸಾವಿರದ 380 ಗ್ರಾಮಗಳಲ್ಲಿ, ಕುಡಿಯುವ ನೀರಿನ ಬವಣೆ – ಆರ್. ಅಶೋಕ, ಕಳವಳ.
- ‘ಆರೋಗ್ಯಕರ ಆರಂಭಗಳು, ಭರವಸೆಯ ಭವಿಷ್ಯಗಳು’ ಧ್ಯೇಯದೊಂದಿಗೆ, ಇಂದು ‘ವಿಶ್ವ ಆರೋಗ್ಯ ದಿನಾಚರಣೆ’.
- ‘ಪೋಷಣ್ ಭೀ, ಪಢೇ ಭೀ’; ರಾಜ್ಯಾದ್ಯಂತ ನಾಳೆಯಿಂದ, ‘ಪೋಷಣ್ ಪಖ್ವಾಡಾ’.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>